ಅ) ಹೌದು

ಆ) ಗ್ರಾಮ ಪಂಚಾಯತ್ ಸಿಬ್ಬಂದಿ ವರ್ಗದವರಿಗೆ ಗ್ರಾಮ ಪಂಚಾಯತ್ ನಿಧಿಯಿಂದ ಸಂಬಳವನ್ನು ನೀಡಲಾಗುತ್ತಿದೆ. ಗ್ರಾಮ ಪಂಚಾಯತ್ ನೌಕರರು ಸರ್ಕಾರಿ ನೌಕರರುಗಳಲ್ಲ ಮತ್ತು ಇವರು ಸರ್ಕಾರಿ ನೌಕರರಿಗೆ ಲಭ್ಯವಿರುವ ಸೇವಾ ಸೌಲಭ್ಯಗಳನ್ನು ಹೊಂದಲು ಹಕ್ಕುದಾರರಲ್ಲ. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 112ರಲ್ಲಿ ನಿರ್ದಿಷ್ಟಪಡಿಸಿರುವಂತೆ ಇವರಿಗೆ ಸೇವಾ ಸೌಲಭ್ಯಗಳನ್ನು ನೀಡುವ ಬಗ್ಗೆ ಗ್ರಾಮ ಪಂಚಾಯಿತಿಗಳು ಸೂಕ್ತವಾಗಿ ನಿರ್ಧರಿಸಿ ಕ್ರಮ ಕೈಗೊಳ್ಳಲು ದಿನಾಂಕ 10.1.1994ರಂದು ಸರ್ಕಾರದ ಆದೇಶವನ್ನು ಹೊರಡಿಸಲಾಗಿದೆ.

ಸಾರಿಗೆ ಸಂಸ್ಥೆ ನಿರಂತರವಾಗಿ ನಷ್ಟವನ್ನು ಅನುಭವಿಸಿಕೊಂಡು ಬರುತ್ತಿರುವ ಬಗ್ಗೆ

361 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1985 ರಿಂದ 1989ರ ವರೆಗೆ ಸಾರಿಗೆ ಸಂಸ್ಥೆ ಅನುಭವಿಸಿದ ನಷ್ಟವೆಷ್ಟು (ವರ್ಷವಾರು ಅಂಕಿಅಂಶಗಳನ್ನು ಒದಗಿಸುವುದು)

ಆ) 1990ರಿಂದ ಪ್ರಸಕ್ತ ವರ್ಷವೂ ಸೇರಿದಂತೆ ಸಾರಿಗೆ ಸಂಸ್ಥೆ ಎಷ್ಟು ನಷ್ಟವನ್ನು ಅನುಭವಿಸಿದೆ?

ಇ) ಇದಕ್ಕೆ ಕಾರಣಗಳೇನು?

ಈ) ನಿರಂತರವಾಗಿ ಸಾರಿಗೆ ಸಂಸ್ಥೆ ಅನುಭವಿಸುತ್ತಿರುವ ನಷ್ಟವನ್ನು ತಪ್ಪಿಸಲು ಯಾವ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ?

ಉ) ನಗರ ಸಾರಿಗೆ ಮಾರ್ಗಗಳನ್ನು ಖಾಸಗಿಯವರಿಗೆ ವಹಿಸಿಕೊಡುವ ವಿಚಾರ ಪರಿಶೀಲನೆಯಲ್ಲಿದೆಯೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಮಂತ್ರಿಗಳು) :

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು 1984-85 ನೇ ಸಾಲಿನಿಂದ 1988-89ನೇ ಸಾಲುಗಳಲ್ಲಿ ಅನುಭವಿಸಿದ ನಷ್ಟದ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಸಾಲು	*ನಷ್ಟದ ಮೊಬಲಗು (ಲಕ್ಷ ರೂ.ಗಳಲ್ಲಿ)*
1984-85	2048.50
1985-86	1413.51
1986-87	797.71
1987-88	499.59
1988-89	5400.05

ಆ) ಸದರಿ ಸಾಲಿನಲ್ಲಿ ಸುಮಾರು 85 ರಿಂದ 87 ಕೋಟಿ ರೂಪಾಯಿಗಳ ನಷ್ಟ ಸಂಭವಿಸಿರಬಹುದೆಂದು ಅಂದಾಜು ಮಾಡಲಾಗಿದೆ. 1989-90ರಿಂದ 1993-94ನೇ ಸಾಲುಗಳಲ್ಲಿ ಅನುಭವಿಸಿದ ಲಾಭ/ನಷ್ಟದ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಸಾಲು	*ಮೊಬಲಗು ಲಾಭ*	*ಮೊಬಲಗು ನಷ್ಟ*
1989-90	-	3770.12

1990-91	130.44	-
1991-92	-	1909.46
1992-93	-	6128.69
1993-94	-	8700.00
		(ತಾತ್ಕಾಲಿಕ)

ಇ) ಸಂಸ್ಥೆಯ ನಷ್ಟಕ್ಕೆ ಸಂಬಂಧಿಸಿದ ಹಲವು ಪ್ರಮುಖ ಕಾರಣಗಳು ಈ ಕೆಳಕಂಡಂತೆ ಇರುತ್ತವೆ.

1) ಸರ್ಕಾರದ ಆದೇಶದ ಮೇರೆಗೆ ವಿದ್ಯಾರ್ಥಿಗಳೂ ಸೇರಿದಂತೆ ವಿವಿಧ ಪ್ರಯಾಣಿಕ ವರ್ಗಕ್ಕೆ ಸಾರಿಗೆ ದರಗಳಲ್ಲಿ ರಿಯಾಯಿತಿಯನ್ನು ನೀಡಿರುವುದರಿಂದ ಸಾರಿಗೆ ಆದಾಯದಲ್ಲಿ ಸಂಭವಿಸುತ್ತಿರುವ ಕಡಿತ.

2) ಇಂಧನ, ಟೈರುಗಳು, ಟ್ಯೂಬುಗಳು, ಬಿಡಿಭಾಗಗಳು ಮತ್ತು ಇತರೆ ಬಳಕೆ ಸಾಮಗ್ರಿಗಳು ಬೆಲೆಗಳಲ್ಲಿ ಕಾಲ ಕಾಲಕ್ಕೆ ಏಗಿರುವ ಹೆಚ್ಚಳ.

3) ಅಧಿಕ ಬಡ್ಡಿಯ ಹೊರೆ

4) ಕಾಲಕಾಲಕ್ಕೆ ಸಂಭವಿಸುತ್ತಿರುವ ಸಿಬ್ಬಂದಿ ವೇತನ ಪರಿಷ್ಕರಣ

5) ಕಾಲಕಾಲಕ್ಕೆ ರಾಜ್ಯ ಸರ್ಕಾರವು ಬಿಡುಗಡೆ ಮಾಡುತ್ತಿರುವ ಹೆಚ್ಚುವರಿ ತುಟ್ಟಿ ಭತ್ಯೆಯನ್ನು ಸಂಸ್ಥೆಯ ಸಿಬ್ಬಂದಿ ನೌಕರ ವರ್ಗಕ್ಕೂ ನೀಡುತ್ತಿರುವಿಕೆ.

6) ಲಾಭದಾಯಕವಲ್ಲದ ಮಾರ್ಗಗಳಲ್ಲಿ ನಗರ ಸಾರಿಗೆ ಸೌಲಭ್ಯವನ್ನು ಒದಗಿಸುತ್ತಿರುವಿಕೆ.

7) ಲಾಭದಾಯಕವಲ್ಲದಿದ್ದರೂ ಸಹ ಕುಗ್ರಾಮಗಳೂ ಸೇರಿದಂತೆ ಹಲವಾರು ಗ್ರಾಮಾಂತರ ಪ್ರದೇಶಗಳಿಗೆ ನೀಡುತ್ತಿರುವ ಸಾರಿಗೆ ಸೌಲಭ್ಯ.

8) ಇಂಧನ ಟೈರುಗಳು, ಬಿಡಿಭಾಗಗಳು ಮುಂತಾದುವುಗಳ ಬೆಲೆಗಳಲ್ಲಿ ಹೆಚ್ಚಳ ಉಂಟಾಗದಲ್ಲೆಲ್ಲಾ ಪ್ರಯಾಣದ ದರಗಳನ್ನು ಪರಿಷ್ಕರಿಸಲು ಸಾಧ್ಯವಾಗದಿರುವಿಕೆ.

ಈ) ನಷ್ಟವನ್ನು ಕಡಿಮೆ ಮಾಡಲು ಸಂಸ್ಥೆಯು ತೆಗೆದುಕೊಂಡಿರುವ ಹಲವು ಕ್ರಮಗಳು ಈ ಕೆಳಕಂಡಂತೆ ಇರುತ್ತವೆ.

1) ಚಾಲಕ ಮತ್ತು ನಿರ್ವಾಹಕರ ನಿರೂಪಿತ ಕೆಲಸದ ಪುನರ್‌ರಚನೆಯ ಮೂಲಕ ಹೆಚ್ಚು ಆದಾಯವನ್ನು ಗಳಿಸುವುದು.

2) ಆದಾಯವನ್ನು ಹೆಚ್ಚಿಸಲು ವಾಹನ ತನಿಖೆಯನ್ನು ಚುರುಕುಗೊಳಿಸುವಿಕೆ.

3) ವಾಹನ ಬಳಕೆಯನ್ನು ಅಧಿಕಗೊಳಿಸಿ ಪ್ರತಿ ಕಿ.ಮೀ. ಗೆ ತಗಲುತ್ತಿರುವ ವೆಚ್ಚವನ್ನು ಕಡಿಮೆಗೊಳಿಸುವಿಕೆ.

4) ಇಂಧನ ಬಳಕೆಯನ್ನು ನಿಗಧಿಗೊಳಿಸಿ ಸದರಿ ಬಾಬ್ತಿನ ಮೇಲೆ ವೆಚ್ಚವನ್ನು ಕಡಿಮೆಗೊಳಿಸುವಿಕೆ.

5) ನಿಗಧಿತ ಪ್ರಮಾಣದಲ್ಲಿ ಹಳೆಯ ಮತ್ತು ಹೊಸ ಟೈರುಗಳನ್ನು ಬಳಸುವ ಮೂಲಕವೂ ಹಳೆಯ ಟೈರುಗಳನ್ನು ಶೀತಲ ಸಂಸ್ಕೆರಣದ ಮೂಲಕ ಪುನಶ್ಚೇತನಗೊಳಿಸುವ ಮೂಲಕವೂ ಸದರಿ ಬಾಬ್ತಿನ ಮೇಲೆ ವೆಚ್ಚವನ್ನು ಕಡಿಮೆಗೊಳಿಸುವಿಕೆ.

6) ವಾಹನ ಸುಧಾರಣೆ ಮತ್ತು ದುರಸ್ತಿ ಕಾರ್ಯವನ್ನು ಉತ್ತಮಗೊಳಿಸಿ ವಾಹನ ವೈಫಲ್ಯವನ್ನು ಸಂಚಾರ ರದ್ದನ್ನು ಕಡಿಮೆಗೊಳಿಸುವಿಕೆ ಮತ್ತು ಮೇಲ್ಮಾಣಿಸಿರುವ ಯೋಜನೆಯನ್ನು ಕಾರ್ಯಗತಗೊಳಿಸಲು ವಾಹನ ದುರಸ್ತಿ ಕಾರ್ಯವನ್ನು ಎರಡು ಹಂತಗಳಿಗೆ ಸೀಮಿತಗೊಳಿಸುವಿಕೆ.

7) ಕಾರ್ಯ ಯೋಜನೆಯಲ್ಲಿ ನಿರೂಪಿಸಿರುವಂತೆ ಸಂಚಾರ ಚಟುವಟಿಕೆಗಳ ನಿರ್ವಹಣೆಯ ಮೇಲೆ ನಿಗಾಯಿರಿಸಿ, ನಿರ್ವಹಣೆಯನ್ನು ಪರಿಶೀಲಿಸಿ ಅವಶ್ಯ ಸೂಕ್ತ ಕ್ರಮಗಳನ್ನು ತೆಗೆದುಕೊಂಡು ಗುರಿ ಸಾಧಿಸುವಿಕೆ.

ಉ) ಇಲ್ಲ

ಮಲೆನಾಡು ಅಭಿವೃದ್ಧಿ ಮಂಡಳಿ

58 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ವಿಜ್ಞಾನ ಯಂತ್ರ ಕಲೆ ಮತ್ತು ಪರಿಸರ ಹಾಗೂ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲೆನಾಡು ಅಭಿವೃದ್ಧಿ ಯೋಜನಾ ಮಂಡಳಿಯಲ್ಲಿ *31.3.94* ಇರತಕ್ಕ ತಾಲ್ಲೂಕುಗಳು ಯಾವುವು?

ಆ) *91-92, 92-93* ಮತ್ತು *93-94*ರಲ್ಲಿ ಈ ಮಂಡಳಿಗೆ ಆಯವ್ಯಯದಲ್ಲಿ ನಿಗಧಿ ಪಡಿಸಿದ ಮೊತ್ತವೆಷ್ಟು? ಬಿಡುಗಡೆ ಮಾಡಿದ ಹಣವೆಷ್ಟು? ಖರ್ಚಾದ ಹಣವೆಷ್ಟು? ಖರ್ಚಾಗದೇ ಉಳಿದ ಹಣವೆಷ್ಟು

ಇ) *94-95*ರಲ್ಲಿ ಈ ಮಂಡಳಿಗೆ ಎಷ್ಟು. ಹಣ ನಿಗಧಿಪಡಿಸಿದೆ? *30.6.94* ವರೆಗೆ ಖರ್ಚಾದ ಹಣವೆಷ್ಟು?

ಡಾ॥ ಹೆಚ್. ಆರ್. ರಾಜು (ವಿಜ್ಞಾನ, ಯಂತ್ರಕಲೆ ಮತ್ತು ಪರಿಸರ ಹಾಗೂ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ರಾಜ್ಯ ಸಚಿವರು) :

ಅ) ಮಲೆನಾಡು ಅಭಿವೃದ್ಧಿ ಮಂಡಳಿಯಡಿಯಲ್ಲಿ ಬರುವ ತಾಲ್ಲೂಕುಗಳ ವಿವರವನ್ನು ಅನುಬಂಧ - 1ರಲ್ಲಿ ನೀಡಲಾಗಿದೆ.

ಆ) ಆಯವ್ಯಯದಲ್ಲಿ ನಿಗೆಧಿ ಮಾಡಿದ ಹಣ ಬಿಡುಗಡೆ ಮಾಡಿದ ಹಣ, ಖರ್ಚಾದ ಹಣ ಮತ್ತು ಬಾಕಿ ಉಳಿದ ಹಣದ ವಿವರಗಳು ಈ ಕಳಗಿಂತಿರುತ್ತವೆ. (ಕೋಟಿ ರೂ. ಗಳಲ್ಲಿ)

ಕ್ರ. ಸಂ.	ವರ್ಷ	ನಿಗಧಿಯಾದ ಆಯವ್ಯಯ	ಬಿಡುಗಡೆ ಯಾದ ಹಣ	ಖರ್ಚಾದ ಹಣ	ಬಾಕಿ ಉಳಿದ ಹಣ
1.	91-92	10	10	ಇಲ್ಲ	10
2.	92-93	35	-	0.11	9.89
3.	93-94	33	33	15.59	27.30

ಇ) 94-95ರಲ್ಲಿ ಮಂಡಳಿಗೆ 35ಕೋಟಿ ರೂ.ಗಳನ್ನು ನಿಗಧಿಪಡಿಸಿರುತ್ತದೆ. 30.6.94ರ ವರೆಗೆ ಹಿಂದಿನ ವರ್ಷಗಳ ಉಳಿಕೆ ಹಣದಿಂದ 8.46ಕೋಟಿ ರೂ.ಗಳು ಖರ್ಚಾಗಿರುತ್ತದೆ.

ಅನುಬಂಧ - 1

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ತಾಲ್ಲೂಕುಗಳ ಹೆಸರು
1	2	3
1.	ಬೆಳಗಾಂ	1. ಖಾನಾಪುರ
		2. ಹುಕ್ಕೇರಿ
		3. ಬೆಳಗಾಂ